# ಆಹಾ ಸುದ್ದಿ!

★ ಸಸಿತೋಟ



ಉರುಗ್ವೆಯಲ್ಲಿ ಈ ಕುರಿಮರಿಗೆ ವಂಶವಾಹಿ ಬದಲಾವಣೆ ಮಾಡಿ, ಅತಿನೇರಳೆ ಬೆಳಕಿನಲ್ಲಿ ಹೊಳೆಯುವಂತಹ ಗುಣ ಸೇರಿಸಲಾಗಿದೆ. ರಾತ್ರಿ ಅನ್ಯರ ಮನೆಗೆ ನುಗ್ಗುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡವರಿಗೂ ಈ ವಂಶವಾಹಿ ಸೇರಿಸುವಂತಿದ್ದರೆ...!

102ನೇ ಹುಟ್ಟುಹಬ್ಬ ಆಚರಿಸಿಕೊಂಡ ಕ್ಯೂಬಾದ ಹವಾನಾದ ಈ ಅಜ್ಜ ಕಾನ್‌ರ್‍ಯಾಡೊ ಅಮೆರಿಕದ ಮಾಜಿ ಬೇಸ್‌ಬಾಲ್ ಆಟಗಾರನಂತೆ. ಈಚೆಗಷ್ಟೆ ಮಾಜಿ ಬೇಸ್‌ಬಾಲ್ ಆಟಗಾರರಿಗೆ ನೀಡುವ ಪಿಂಚಣಿ ಬಾಕಿ ಮೊತ್ತವನ್ನು ಒಮ್ಮೆಲೆ ಪಡೆದುಕೊಂಡ ಅಜ್ಜ ಅದನ್ನೆಲ್ಲ ತನ್ನ ಹವಾನಾ ಸಿಗರೇಟ್‌ಗೆ ಬಳಸುವನಂತೆ. 102ರ ಹರೆಯದಲ್ಲಿ ಇನ್ನೇನು ಆಸೆಯಿರುತ್ತದೆ? ಮನೆ, ಕಾರು, ವಿದೇಶಿ ಪ್ರವಾಸ.... ಅದೆಲ್ಲ ವಯಸ್ಸು, ಆಯಸ್ಸು ಉಳ್ಳವರಿಗೆ ಎಂದು ಗೊತ್ತು ಅಜ್ಜನಿಗೆ.



ಜರ್ಮನಿಯಲ್ಲಿ ಕಳೆದ ವಾರ 'ಜರ್ಮನ್ ಓಪನ್ ರೊಬೊ ಕಪ್' ನಡೆಯಿತು. 14 ದೇಶಗಳ 43 ರೊಬಾಟ್ ತಂಡಗಳು ಫುಟ್ಬಾಲ್ ಪಂದ್ಯಗಳಲ್ಲಿ ಪಾಲ್ಗೊಂಡವು. ಆಟ ಶಿಸ್ತಿನಿಂದ ನಡೆಯಿತು ಎಂದು ಹೇಳಲಡ್ಡಿಯಿಲ್ಲ. ಮೈದಾನದಲ್ಲಿ ಪರಸ್ಪರ ತಳ್ಳಾಟ, ಹೊಡೆದಾಟ ನಡೆಸಲು ಇನ್ನೂ ಈ ರೊಬಾಟ್‌ಗಳಿಗೆ ಟ್ಯೂನ್ ಮಾಡಿಲ್ಲ.



ಅಮೆರಿಕಾದ ಮೊಂಟೆನಾದ ಟೇಲರ್ ಎಂಬಾತ ಐದು ವರ್ಷಗಳ ಹಿಂದೆಯೇ ಹೆಂಡತಿಗೆ ವಿಚ್ಛೇದನ ನೀಡಿದ್ದ. ಆಗಿನಿಂದಲೂ 'ಲವ್'ಗಾಗಿ ಆತನ ಹುಡುಕಾಟ ಮುಂದುವರಿದಿತ್ತು, ಹೊಸ ಲವ್‌ಗಾಗಿ ಅಲ್ಲ, ಆತ ಪ್ರೀತಿಯಿಂದ ಸಾಕಿದ ಗಿಳಿ 'ಲವ್'ಗಾಗಿ. ವಿಚ್ಛೇದನ ಸಂದರ್ಭ ಲವ್ ಹೆಂಡತಿಯ ಸೊತ್ತಾಗಿತ್ತು. ಇತ್ತೀಚೆಗೆ ಟೇಲರ್ ಪಕ್ಷಿಧಾಮಕ್ಕೆ ಹೋದಾಗ ಲವ್ವೇ ಆತನನ್ನು ಗುರುತು ಹಿಡಿದು ಹಿಂದೆ ಬಂತಂತೆ. ಲವ್ ಎಂದರೆ ಹೀಗೆ.. ಹಿಂದೆ ಹಿಂದೆ ಬರುವುದು.

ಲಂಡನ್ನಿನ ವಿಮಾನ ನಿಲ್ದಾಣದ ಉದ್ಯೋಗಿ ಕ್ರಿಸ್ ಹೋಮ್ಸ್ ತನ್ನ ಹುಟ್ಟುಹಬ್ಬದಂದು ಮೇಲಧಿಕಾರಿಗೆ ಇಡೀ ಕೇಕ್ ನೀಡಿದ. ಶುಭಾಶಯ ಹೇಳಲು ಹೋದ ಆ ಅಧಿಕಾರಿ ಕೇಕ್ ಮೇಲಿರುವ ಬರಹ ಓದಿ ವಿದಾಯದ ನುಡಿ ಹೇಳಬೇಕಾಯಿತು. ಹೋಮ್ಸ್ ಈ ಕೇಕ್ ಮೇಲೆ ತನ್ನ ರಾಜೀನಾಮೆ ಪತ್ರವನ್ನೇ ಬರೆದುಬಿಟ್ಟಿದ್ದ. ಅಷ್ಟಕ್ಕೂ ಹೋಮ್ಸ್ ತನ್ನ ಕೇಕ್ ಉದ್ಯಮದ ಸಲುವಾಗೇ ರಾಜೀನಾಮೆ ನೀಡಿದ್ದ. ಚಪ್ಪಲಿ ಉದ್ಯಮ ನಡೆಸುತ್ತಿದ್ದರೆ.. ಮೇಲಧಿಕಾರಿಯಿಂದ ಶುಭಾಶಯದ ಬದಲು ಅಪಾಯಕಾರಿ ಪ್ರಕ್ರಿಯೆಯೇ ದೊರಕುತ್ತಿತ್ತೇನೋ!




ಕೆನಡಾದ ಸಾಸ್ಕಾಟೂನ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಸ್ಕಾಟ್ ಹೊಸ ಸಂಶೋಧನೆ ಪ್ರಕಟಿಸಿದ್ದಾರೆ. ಮೂಗಿನಲ್ಲಿ ಬೆರಳು ತೂರಿಸಿ ಸಿಕ್ಕ ವಸ್ತುವನ್ನು ತಿಂದರೆ ಅದು ಆರೋಗ್ಯಕ್ಕೆ ಒಳ್ಳೆಯದಂತೆ. ಅಂದರೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದಂತೆ. ಇನ್ನು ಮೇಲೆ ಮೂಗಿನೊಳಗೆ ಬೆರಳಿಟ್ಟುಕೊಂಡವರತ್ತ ಅಸಹ್ಯದಿಂದ ನೋಡುವ ಬದಲು 'ಏನು ಆರೋಗ್ಯವಂತರಪ್ಪ' ಎಂದು ಮೂಗಿನ ಮೇಲೆ ಬೆರಳಿಡುವ ಕಾಲ ಬರಬಹುದು!